ಕೆ.ಐ.ಎ.ಡಿ.ಬಿಯಿಂದ ಸ್ವಾಧೀನ ಪಡಿಸಿಕೊಂಡು ಪ್ರಾಧಿಕಾರಕ್ಕೆ ಹಸ್ತಾಂತರಿಸಬೇಕಾಗಿದೆ. ಮುಂದುವರಿದ ಕ್ರಮವಾಗಿ ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯ ಹಾಗೂ ರಾಜ್ಯ ಸರ್ಕಾರದ ನಡುವೆ ಒಂದು ಒಡಂಬಡಿಕೆ ಏರ್ಪಾಡಾಗಬೇಕಾಗಿದೆ.

ಇ) ಮೈಸೂರು ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಯೋಜನಾ ಮೊತ್ತದ ಅಂದಾಜು ವೆಚ್ಚವನ್ನು ಭಾರತೀಯ ವೈಮಾನಿಕ ಪ್ರಾಧಿಕಾರವು ಅಂದಾಜು ಮಾಡಬೇಕಾಗಿರುತ್ತದೆ.

ಈ) ವಿಮಾನ ನಿಲ್ದಾಣವನ್ನು ಭಾರತೀಯ ವೈಮಾನಿಕ ಪ್ರಾಧಿಕಾರದವತಿಯಿಂದ ಅಭಿವೃದ್ಧಿಪಡಿಸಿ ಕಾರ್ಯಾಚರಣೆಗೊಳಿಸಲು ಸದರಿ ಪ್ರಾಧಿಕಾರವು ಒಪ್ಪಿದ್ದು ಈ ಬಗ್ಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಾಗರೀಕ ವಿಮಾನಯಾನ ಮಂತ್ರಾಲಯವು ಒಂದು ಒಡಂಬಡಿಕೆಗೆ ಸಹಿ ಹಾಕಬೇಕಾಗಿದೆ. ತರುವಾಯ ವಿಮಾನ ನಿಲ್ದಾಣವನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಅಭಿವೃದ್ಧಿ ಪಡಿಸುವುದನ್ನು / ಮೇಲ್ದರ್ಜೆಗೇರಿಸುವುದನ್ನು ಭಾರತೀಯ ವೈಮಾನಿಕ ಪ್ರಾಧಿಕಾರವು ನಿರ್ಧರಿಸಬೇಕಾಗಿದೆ.

೩೯೦೮ (೪೩೯೬) ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್ :– ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನಲ್ಲಿ ಬಂಡವಾಳ ಹೂಡಿಕೆದಾರರು ಬಂಡವಾಳ ಹೂಡುವಂತಾಗಲೂ ಸರ್ಕಾರ ಯಾವ ಯಾವ ಕ್ರಮ ವಹಿಸಿದೆ;

ಆ) ಇಲ್ಲಿ ಕೈಗಾರಿಕೆ ಸ್ಥಾಪನೆಗೆ ಬಂಡವಾಳ ಹೂಡಲು ಮುಂದೆ ಬಂದಿರುವ ಸಂಸ್ಥೆಗಳಾವುವು; ಎಷ್ಟು ಬಂಡವಾಳ ಹೂಡಲಾಗುವುದು;

ಇ) ಇದರಿಂದಾಗಿ ಎಷ್ಟು ಮಂದಿಗೆ ಉದ್ಯೋಗ ಅವಕಾಶ ದೊರೆಯುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ಮೈಸೂರಿನ ಕೈಗಾರಿಕೀಕರಣಕ್ಕಾಗಿ ತೆಗೆದುಕೊಳ್ಳಲಾದ ಪ್ರಮುಖ ಕ್ರಮಗಳು :

೧. ಈಗಾಗಲೇ ಕೆಐಎಡಿಬಿ ಸಂಸ್ಥೆಯಿಂದ ಮೇಟಗಲ್ಲಿ, ಹೂಟಗಲ್ಲಿ, ಬೆಳವಾಡಿ, ಹೆಬ್ಬಾಳಗಳಲ್ಲಿ ೩೨೩೯ ಎಕರೆ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿದ್ದು, ಉದ್ದಿಮೆದಾರರ ಬೇಡಿಕೆ ಮೇರೆಗೆ ಹೆಚ್ಚುವರಿ ೨೧೯ ಎಕರೆ ಜಮೀನು ಭೂಸ್ವಾಧೀನ ಪಡಿಸುವ ಕ್ರಮ ಪ್ರಗತಿಯಲ್ಲಿದೆ.

೨. ತಾಂತ್ರಿಕ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಸರ್ಕಾರಿ ಉಪಕರಣ ಕೋಠಡಿ ಮತ್ತು ತರಬೇತಿ ಕೇಂದ್ರ (G.T.T.C) ನ್ನು ಸ್ಥಾಪಿಸಲಾಗಿದೆ.

೩. ರಾಜ್ಯ ಮತ್ತು ಕೇಂದ್ರ ಸರ್ಕಾರದ ಜಂಟಿ ಆಶ್ರಯದಲ್ಲಿ ಕೇಂದ್ರೀಯ ಪ್ಲಾಸ್ಟಿಕ್ ತಂತ್ರಜ್ಞಾನ ತರಬೇತಿ ಸಂಸ್ಥೆಯನ್ನು ಸ್ಥಾಪಿಸಿದೆ.

೪. ಮಾಹಿತಿ ತಂತ್ರಜ್ಞಾನ ಕ್ಷೇತ್ರ ಅಭಿವೃದ್ಧಿಗಾಗಿ STPI ಉಪಕೇಂದ್ರವನ್ನು ಪ್ರಾರಂಭಿಸಲಾಗಿದೆ.

೫. ಸ್ಥಳೀಯ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ವೈಜ್ಞಾನ ಮತ್ತು ತಂತ್ರಜ್ಞಾನ ಉದ್ಯಮಿಗಳ ಪಾರ್ಕ್ ಸ್ಥಾಪಿಸಲಾಗಿದೆ.

೬. ಮುಂಬರುವ ಅಕ್ಟೋಬರ್ ೨೦೦೫ ರಲ್ಲಿ ಮೈಸೂರಿನಲ್ಲಿ ಪ್ರಾದೇಶಿಕ ಬಂಡವಾಳ ಹೂಡಿಕೆದಾರರು ಸಮಾವೇಶವನ್ನು ಆಯೋಜಿಸಲು ಉದ್ದೇಶಿಸಲಾಗಿದೆ.

೮) ೨೦೦೧ ರ ನಂತರ ಈ ಕೆಳಕಂಡ ಬೃಹತ್ ಯೋಜನೆಗಳನ್ನು ಮೈಸೂರಿನಲ್ಲಿ ಸ್ಥಾಪಿಸಲು ಉನ್ನತ ಮಟ್ಟದ ಸಮಿತಿಯಿಂದ ಅನುಮೋದನೆ ನೀಡಲಾಗಿದೆ.

ಕ್ರಸ	ಘಟಕದ ಹೆಸರು	ಬಂಡವಾಳ ಹೂಡಿಕೆ (ರೂ. ಕೋಟಿ)
೧.	ಶುಭಾಸ್ ಕಬಿನಿ ಪವರ್ ಕಾರ್ಪೋರೇಷನ್ ಲಿ.,	೮೫.೦೦
೨.	ಟಿ.ವಿ.ಎಸ್. ಮೋಟಾರ್ ಕಂಪನಿ ಲಿ., (ದ್ವಿಚಕ್ರ ವಾಹನ, ವಿಸ್ತರಣಾ ಯೋಜನೆ)	೫೦೦.೦೦
೩.	ಇನ್‌ಫೋಸಿಸ್ ಟೆಕ್ನಾಲಾಜಿ ಲಿ., (ಮಾಹಿತಿ ತಂತ್ರಜ್ಞಾನ ಘಟಕ)	೩೦೦.೦೦
೪.	ಎಲ್ ಅಂಡ್ ಟಿ.ಲಿ., (ವಿದ್ಯುತ್ ಮಾನ ಮತ್ತು ಮಾಹಿತಿ ತಂತ್ರಜ್ಞಾನ ಘಟಕ)	೯೨.೧೦
	ಒಟ್ಟು	೯೭೭.೧೦

ಇದಲ್ಲದೆ ಮೇಲ್ಕಂಡ ಅವಧಿಯಲ್ಲಿ ರಾಜ್ಯ ಮಟ್ಟದ ಏಕಗಾವಕ್ಷಿ ಸಮಿತಿಯಿಂದ ಒಟ್ಟು ರೂ. ೩೧೦.೫೧ ಕೋಟಿ ಬಂಡವಾಳ ಹೂಡಿಕೆಯ ೧೯ ಯೋಜನೆಗಳನ್ನು ಅನುಮೋದಿಸಲಾಗಿದೆ.

ಇ) ಉನ್ನತ ಮಟ್ಟದ ಸಮಿತಿಯಿಂದ ಅನುಮೋದಿತ ಯೋಜನೆಗಳಿಂದ ೮೯೪೬ ಜನರಿಗೂ, ರಾಜ್ಯ ಮಟ್ಟದ ಏಕಗಾವಕ್ಷಿ ಸಮಿತಿಯಿಂದ ಅನುಮೋದಿತ ಯೋಜನೆಗಳಲ್ಲಿ ೧೦,೪೮೩ ಜನರಿಗೂ ಉದ್ಯೋಗಾವಕಾಶ ದೊರಕಲಿದೆ.

೩೯೦೯ (೪೩೯೪) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್ (ಚಾಮರಾಜ) :- ಮಾನ್ಯ ಭಾರಿ, ಮಧ್ಯಮ, ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಾದ್ಯಂತ ಮುಚ್ಚಲ್ಪಟ್ಟಿರುವ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಯಾವುವು; (ಪ್ರತ್ಯೇಕ ವಿವರ ನೀಡುವುದು);

ಆ) ಈ ಕಾರ್ಖಾನೆಗಳು ಯಾವ ಯಾವ ದಿನಾಂಕಗಳಿಂದ ಮುಚ್ಚಲ್ಪಟ್ಟಿವೆ; ಈ ಕಾರ್ಖಾನೆಗಳಲ್ಲಿ ಎಷ್ಟೆಷ್ಟು ಮಂದಿ ಕೆಲಸ ನಿರ್ವಹಿಸುತ್ತಿದ್ದರು; ಪ್ರತೀ ಕಾರ್ಖಾನೆವಾರು ವಿವರ ನೀಡುವುದು;

ಇ) ಮುಚ್ಚಲ್ಪಟ್ಟ ಈ ಕಾರ್ಖಾನೆಗಳ ಕಾರ್ಮಿಕರಿಗೆ ಬಾಕಿ ಉಳಿಸಿಕೊಂಡಿರುವ ಮೊತ್ತ ಎಷ್ಟು; ಈ ಮೊತ್ತವನ್ನು ಆಯಾ ಕಾರ್ಮಿಕರಿಗೆ ಕೊಡಿಸಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ ಮಧ್ಯಮ, ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಲಭ್ಯ ಸಚಿವರು)

ಅ) ಮೈಸೂರು ಜಿಲ್ಲೆಯಲ್ಲಿ ಮುಚ್ಚಲ್ಪಟ್ಟಿರುವ

೧. ಭಾರಿ ಪ್ರಮಾಣದ ಕೈಗಾರಿಕೆಗಳು	೫
೨. ಮಧ್ಯಮ ಪ್ರಮಾಣದ ಕೈಗಾರಿಕೆಗಳು	೧೪
೩. ಸಣ್ಣ ಪ್ರಮಾಣದ ಕೈಗಾರಿಕೆಗಳು	೩೬
ಒಟ್ಟು	**೫೫**